**ಗೆಳೆತನ - ಚೆನ್ನವೀರ ಕಣವಿ**




***<u>ಕವಿ ಪರಿಚಯ</u>***

**ನವೋದಯ ಪರಂಪರೆಯ ಪ್ರಮುಖ ಕವಿಗಳಲ್ಲಿ ಒಬ್ಬರಾದ ಚೆನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳದವರು.ಇವರು ೧೯೨೮**

**ಆಕಾಶ ಬುಟ್ಟಿ ಭಾವಜೀವಿ, ಮಧುಚಂದ್ರ , ದೀಪಧಾರಿ,ಮಣ್ಣಿನ ಮೆರವಣಿಗೆ ,ನೆಲಮುಗಿಲು ,ಕಾವ್ಯಾಕ್ಷಿ ,ಚಿರಂತನ ದಾಹ ಇವೇ ಮೊದಲಾದವು ಇವರ ಪ್ರಮುಖ ಕವನ ಸಂಕಲನಗಳು . ಇವರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ,೧೯೮೧ ರಲ್ಲಿ ಜೀವಧ್ವನಿ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ .೧೯೯೬ರಲ್ಲಿ ಹಾಸನದಲ್ಲಿ ನಡೆದ ೬೫ ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಗೆಳೆತನ ಕವನವನ್ನು ಅವರ ಆಕಾಶ ಬುಟ್ಟಿ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.**

**<u>ಪ್ರಶ್ನೋತ್ತರಗಳು</u>**

**೧.ಕವಿ ಎಲ್ಲಿ ತಂಗಿದ್ದಾರೆ ?**

**ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ ನೆರಳಿನ ತಂಪಿನಲ್ಲಿ ತಂಗಿದ್ದಾರೆ.**

**೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ ?**

**ಜೀವನದ ಮುಗಿಯದ ಕಷ್ಟ ನೋವುಗಳ ಕಾವನ್ನು ಕವಿ ಮೌನದಲ್ಲಿ ನುಂಗಿದ್ದಾರೆ.**

**೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ ?**

**ಗೆಳೆತನದ ಮನಸ್ಸಿನ ಭಾವನೆ ಬಾನಿನಂತೆ ಅಗಲವಾಗಿದೆ. ಸ್ಫಟಿಕದಂತೆ ಶುದ್ಧವಾಗಿದೆ.**

**೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು ?**

**ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು ಇಲ್ಲ ಎಂಬುದು ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ .**

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ ?**

**ಗೆಳೆತನದಲ್ಲಿ ವಂಚನೆಯಿಲ್ಲ, ಚಂಚಲತೆ ಎಳ್ಳಷ್ಟೂ ಇಲ್ಲ. ಮೇಲು ಕೀಳುಗಳು ಎನ್ನುವ ಬೇಧವೂ ಇಲ್ಲ. ಅಹಮಿಕೆಯ ನೆಪವಿಲ್ಲ.ದ್ವೇಷ ಗುಣಕ್ಕೆ ಆಸ್ಪದವಿಲ್ಲ.ಸಣ್ಣತನಕ್ಕೆ ಸಂಕೋಚಕ್ಕೆ ಅವಕಾಶವಿಲ್ಲ.**

**೨.ಗೆಳೆತನದ ಶುಚಿರುಚಿ ಎಂಥದ್ದು ?ಉಪ್ಪಿಗಿಂತಲೂ ರುಚಿಯಿಲ್ಲ.ತಾಯಿಗಿಂತ ಬಂಧುವಿಲ್ಲ.ಎನ್ನುವ ಗಾದೆ ಮಾತಿದೆ. ಗೆಳೆತನದ ಶುಚಿ ರುಚಿಯು ಇದಕ್ಕು ಮಿಗಿಲಾಗಿರುವಂತದ್ದು. ಎಲ್ಲರಿಗೂ ಇದು ಅರ್ಥವಾಗಲಾರದು. ಯಾರು ಈ ಸವಿಯನ್ನು ಸವಿದಿರುವರೋ ಅಂಥವರಿಗೆ ಮಾತ್ರವೇ ಇದರ ಅರಿವಾಗಲು ಸಾಧ್ಯ**

ಮಮತಾ ಭಾಗ್ವತ್ mamatabhagwat1@gmail.com

೩.ಜೀವನ ರಸಪಾಕವಾಗುವುದು ಹೇಗೆ ?

ಸ್ನೇಹಿತರು ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಬೇಕು. ಜೀವನದ ಆಗು ಹೋಗುಗಳಿಗೆ ಬಾಗದಂತೆ, ಕುಗ್ಗದಂತೆ ,ಒಬ್ಬರಿಗೊಬ್ಬರು ಹೆಗಲುಕೊಟ್ಟು ಬದುಕಬೇಕು. ಸುಖದಲ್ಲಿ ಸಂತಸ ಪಟ್ಟು ದುಃಖದಲ್ಲಿ ಪರಸ್ಪರ ನೆರವಾಗಿ ಸಹಭಾಗಿಗಳಾದರೆ ಜೀವನ ರಸದ ಪಾಕವಾಗುವುದು.

ನಾಲ್ಕು ಐದು ವಾಕ್ಯಗಳಲ್ಲಿ ಉತ್ತರಿಸಿ.

೧.ಗೆಳೆತನವು ಇಹಲೋಕಕಿರುವ ಅಮೃತ ಹೇಗೆ ?

ಗೆಳೆತನವು ವಿಶಾಲವಾದ ಆಲದ ಮರವಿದ್ದಂತೆ . ಇಲ್ಲಿ ಪ್ರೀತಿ,ವಿಶ್ವಾಸದ ತಂಪಾದ ನೆರಳು ಇರುವುದು. ಜೀವನದ ಕೊನೆಯಿಲ್ಲದ ಬವಣೆ ನೋವುಗಳನ್ನು ಗೆಳೆತನದ ಸ್ಪರ್ಷದಿಂದ ಮರೆಯಬಹುದು. ಗೆಳೆತನವು ಇಹ ಲೋಕದಲ್ಲಿರುವ ಅಮೃತದ ಹಾಗೆ  ಇರುವುದು. ಗೆಳೆತನವನ್ನು ತೊರೆದರೆ ಜೀವನ ಮರಣದಂತೆ .

೨. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ ? ವಿವರಿಸಿ.

ಗೆಳೆತನದಲ್ಲಿ ಗೆಳೆಯರಿಬ್ಬರ ಮನಸ್ಸಿನ ಭಾವವು ಸ್ಫಟಿಕದಂತೆ ಶುದ್ಧವಾಗಿರುತ್ತದೆ. ಎದೆಯು ಕಲ್ಮಶಗಳಿಲ್ಲದ ತಿಳಿಯಾದ ಕೊಳದಂತಿರುತ್ತದೆ. ಮನವು ಬಾನಿನಂತೆ ಅಗಲವಾಗಿರುತ್ತದೆ. ಬೆಲದಿಂಗಳಿನಂತೆ ತಂಪಾಗಿರುತ್ತದೆ.ನಿಜವಾದ ಗೆಳೆಯರಲ್ಲಿ ವಂಚನೆ ,ಚಂಚಲತೆ ,ಮೇಲುಕೀಳುಗಳೆನ್ನುವ ಬೇಧ ಭಾವನೆಗೆ ಅವಕಾಶವಿಲ್ಲ. ಅಹಂಕಾರ ದ್ವೇಷದ ಭಾವನೆಗೆ ಆಸ್ಪದವಿಲ್ಲ.

೩. ಗೆಳೆಯರು ಹೇಗೆ ಬಾಳುತ್ತಾರೆ ?

ಜೀವನದ ಆಗು ಹೋಗುಗಳನ್ನು ಸಹಿಸಿಕೊಳ್ಳುವ ಮನೋಭಾವನೆ ಗೆಳೆಯರಲ್ಲಿರುತ್ತದೆ . ಗೆಳೆಯರು ಪರಸ್ಪರ ಸಂತಸ ಹಾಗೂ ದುಃಖಗಳಲ್ಲಿ ಸಹಭಾಗಿಗಳಾಗಿರುತ್ತಾರೆ. ಹಾಗಾದಾಗ ಜೀವನವು ರಸದ ಪಾಕದಂತಿರುತ್ತದೆ. ಗೆಳೆಯರು ಸರಸ ವಿರಸವನ್ನು ಸ್ವೀಕರಿಸಿ ಗಂಧದ ರೀತಿ ಜೀವ ತೇಯ್ದು ಪರಸ್ಪರರಿಗಾಗಿ ಬದುಕುತ್ತಾರೆ.

ಸಂದರ್ಭಾನುಸಾರ ವಿವರಿಸಿ.

೧. ''ಅದನುಳಿದರೇನಿಹುದು ಜೀವನ್ಮೃತ''

ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನವು ಈ ಲೋಕದಲ್ಲಿ ಮಾನವನಿಗೆ ದೊರೆತ ಅಮೃತದಂತೆ .ಅದನ್ನು ಬಿಟ್ಟರೆ ಜೀವನದಲ್ಲಿ ಇನ್ನೇನು ಇರಲು ಸಾಧ್ಯ ? ಗೆಳೆತನವಿಲ್ಲದ ಬದುಕು ಮರಣದಂತೆ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಗೆಳೆತನದ ಭಾವವು ಅಮೃತದ ಹಾಗೆ ಬದುಕಲು ಸ್ಫೂರ್ತಿಯನ್ನು ನೀಡುವುದು ಎಂಬುದು ಕವಿಯ ನಿಲುವಾಗಿದೆ .

೨. '' ಭಾವ ಶುದ್ಧ ಸ್ಫಟಿಕ ಬೆಳದಿಂಗಳು! ''

ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನದಲ್ಲಿ ವಂಚನೆ ,ಚಂಚಲತೆ ,ಅಹಮಿಕೆ,ಸಣ್ಣತನ ಮೊದಲಾದ ದುರ್ಗುಣಗಳಿಗೆ ಅವಕಾಶವಿಲ್ಲ.ಮನವು ಬಾನಿನಷ್ಟು ವಿಶಾಲ ,ಸ್ಫಟಿಕದಂತೆ ಶುದ್ಧ  ಭಾವನೆಗಳು , ಬೆಳದಿಂಗಳಿನಂತೆ ತಂಪು ಎಂದು ಕವಿ ಹೇಳಿದ್ದಾರೆ.

ಮಮತಾ ಭಾಗ್ವತ್ mamatabhagwat1@gmail.com

ಸ್ವಾರಸ್ಯ: ಗೆಳೆತನವು ನಿರ್ವಂಚನೆಯಿಂದ ಕೂಡಿರುವಂತದ್ದು ,ಕಪಟಕ್ಕೆ ಅಲ್ಲಿ ಆಸ್ಪದವಿಲ್ಲ .

೩. ''ಕಂಡ ಕಂಡವರೇನು ಬಲ್ಲರಿದನು ''

ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನವು ಪರಿಶುದ್ಧವಾದುದು ,ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಎಂಬ ಗಾದೆ ಮಾತಿದೆ. ಗೆಳೆತನದ ಶುಚಿ ರುಚಿಯು ಇದಕ್ಕೂ ಮಿಗಿಲಾದುದು . ಯಾರು ಇದನ್ನು ಸವಿದಿದ್ದಾರೋ ಅವರಿಗೆ ಮಾತ್ರ ಇದರ ಅರಿವಾಗುವುದು.

ಸ್ವಾರಸ್ಯ : ಗೆಳೆತನದ ಸವಿಯನ್ನು ಅನುಭವಿಸಿದವರಿಗೆ ಅದರ ಮಹತ್ವ ಅರ್ಥವಾಗವುದು. ಅನುಭವಿಸಲಾರದವರಿಗೆ ಅದು ಅರ್ಥವಾಗದು ಎಂದು ಕವಿ ಹೇಳಿದ್ದಾರೆ.

೪. ''ಬಾಳುವರು ಗಂಧದೊಲು ಜೀವ ತೇಯ್ದು !"

ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆಯರು ಪರಸ್ಪರ ಸುಖದುಃಖದಲ್ಲಿ ಭಾಗಿಗಳಾಗುವರು. ಗಂಧದ ಹಾಗೆ ಪರಸ್ಪರರಿಗಾಗಿ ಜೀವ ತೇಯುವರು . ಒಬ್ಬರ ಅಗತ್ಯತೆಗೆ ಇನ್ನೊಬ್ಬರು ಒದಗುವರು ಎಂಬುದು ಕವಿಯ ಅಭಿಪ್ರಾಯವಾಗಿದೆ.

ಸ್ವಾರಸ್ಯ : ನಿಜವಾದ ಗೆಳೆಯರು ಪರಸ್ಪರರಿಗಾಗಿ ಬಾಳುವರು. ತಮ್ಮ ಸ್ವಾರ್ಥಕ್ಕೆ ಗೆಳೆತನದಲ್ಲಿ ಅವಕಾಶವಿಲ್ಲ ಎಂಬುದು ಕವಿಯ ಅಭಿಪ್ರಾಯವಾಗಿದೆ.

ಗುಂಪಿಗೆ ಸೇರದ ಪದ ಬರೆಯಿರಿ.

೧. ಹೆಗಲುಗೊಟ್ಟು , ಸಂತಸಬಟ್ಟು ,ಉಂಡವನು ,ತಿಳಿಗೊಳ

ಉತ್ತರ : ಉಂಡವನು

೨. ಲೋಕ ,ಅಮೃತ ,ಎದೆ ,ಸಾಹಸ

ಉತ್ತರ : ಎದೆ

೩. ಭಾವಜೀವಿ , ಕಾವ್ಯಾಕ್ಷಿ , ದೀಪಧಾರಿ ,ಜೀವಧ್ವನಿ

ಉತ್ತರ : ಜೀವಧ್ವನಿ

೪. ಬಾನು , ಆಕಾಶ , ಭಾನು , ಗಗನ

ಉತ್ತರ : ಭಾನು

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ವಿವರಿಸಿದ್ದಾರೆ ?

ಮಮತಾ ಭಾಗ್ವತ್ mamatabhagwat1@gmail.com

' ಗೆಳೆತನ ' ಕವನದಲ್ಲಿ ಕವಿ ಚೆನ್ನವೀರಕಣವಿಯವರು ಗೆಳೆತನ ,ಅದರ ಸವಿ , ಮಹತ್ವ ಹಾಗೂ ಅನ್ಯೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಕವಿ ಗೆಳೆತನವು ಇಹ ಲೋಕಕ್ಕಿರುವ ಅಮೃತ ಎಂದು ಹೇಳುತ್ತಾರೆ. ನಿಜವಾದ ಗೆಳೆತನವಿದ್ದರೆ ,ಗೆಳೆಯರಿದ್ದರೆ ಜೀವನದ ಕಷ್ಟ ನಷ್ಟಗಳನ್ನು ಮರೆತು ಬಾಳಬಹುದು ಎಂಬುದು ಕವಿಯ ಅಭಿಪ್ರಾಯವಾಗಿದೆ. ಗೆಳೆತನದಲ್ಲಿ ವಂಚನೆ, ಚಂಚಲತೆ ,ಮೇಲು ಕೀಳು ಎಂಬ ಭಾವನೆಗೆ ಅವಕಾಶವಿಲ್ಲ. ಅಹಂಕಾರದ ಭಾವನೆಗೆ ಆಸ್ಪದವಿಲ್ಲ.ದ್ವೇಷವಾಗಲೀ, ಸಣ್ಣತನವಾಗಲೀ, ಸಂಕೋಚವಾಗಲೀ ಇವು ಯಾವುದೇ ಭಾವಗಳೂ ಅಲ್ಲಿ ಪ್ರವೇಶಿಸುವುದಿಲ್ಲ. ಗೆಳೆತನದಲ್ಲಿ ಗೆಳೆಯರ ಮನವು ಬಾನಿನಂತೆ ವಿಶಾಲವಾದ ಉತ್ತಮ ಗುಣಗಳನ್ನು ಹೊಂದಿದ್ದು, ಎದೆಯಲ್ಲಿ ಯಾವುದೇ ಕಲ್ಮಶ ಭಾವಗಳಿಲ್ಲದೇ ತಿಳಿಯಾಗಿರುವುದು. ಬೆಳದಿಂಗಳಿನ ತಂಪನ್ನು ಗೆಳೆತನವು ನೀಡುವುದು. ಉಪ್ಪಿಗಿಂತ ರುಚಿಯಿಲ್ಲ ,ತಾಯಿಗಿಂತ ಬಂಧುವಿಲ್ಲ ಎನ್ನುವ ಹಾಗೆ ಗೆಳೆತನವು ಇವೆಲ್ಲ ಭಾವಗಳನ್ನು ಮೀರಿಸುವಂತದ್ದು. ಯಾರು ಗೆಳೆತನದ ಸವಿಯನ್ನು ಅನುಭವಿಸಿರುವರೋ ಅಂತವರಿಗಷ್ಟೇ ಗೆಳೆತನದ ಮಹತ್ವ ಅರಿವಾಗುವುದು. ನಿಜವಾದ ಗೆಳೆಯರು ಕಷ್ಟದಲ್ಲಿ ಪರಸ್ಪರ ಸಹಭಾಗಿಗಳಾಗಿ, ವಿರಸವನ್ನು ಮರೆತು ಬಾಳುವರು ಎಮದು ಕವಿ ಗೆಳೆತನದ ಮಹತ್ವವನ್ನು ವಿವರಿಸಿದ್ದಾರೆ.

ಮಮತಾ ಭಾಗ್ವತ್ mamatabhagwat1@gmail.com